ಅ.ದಾ.ನಂ.446/2019
ಪಿ.ಡಬ್ಲ್ಯೂ:1

**<u>ಸಾಕ್ಷಿಯನ್ನು ಇಂದು ದಿನಾಂಕಃ 17.10.2025 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು</u>**
**<u>ಮುಂದುವರೆದ ಪಾಟೀ ಸವಾಲುಃ ಶ್ರೀ. ಎಸ್ ಎನ್ ಎಸ್., ವಕೀಲರಿಂದ 1 ನೇ ಪ್ರತಿವಾದಿ ಪರವಾಗಿ</u>**

1. ವಾದ ಪತ್ರ ಮತ್ತು ನನ್ನ ಪ್ರಮಾಣ ಪತ್ರವನ್ನು ತಯಾರಿಸಲು ನಮ್ಮ ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ನನ್ನ ವಾದ ಪತ್ರದಲ್ಲಿ ಅವಶ್ಯಕವಾದ ಅಂಶಗಳು ಇಲ್ಲ ಎಂದರೆ ಸರಿಯಲ್ಲ. ನಾನು ಹುಟ್ಟುವ ಮೊದಲು ಆದ ಘಟನೆಗಳ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿ. ನನ್ನ ವಾದ ಪತ್ರದಲ್ಲಿ ನಮ್ಮ ತಂದೆಯ ಕುರಿತು ವಿವರವಾದ ಮಾಹಿತಿ ನಮೂದಿಸಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ವಾದ ಪತ್ರದಲ್ಲಿ ನನ್ನ ತಾಯಿಯಾದ ಶಾರದಾರವರ ಕುಟುಂಬದ ಬಗ್ಗೆ ಸಂಪೂರ್ಣ ಮಾಹಿತಿ ನೀಡಿಲ್ಲ ಎಂದರೆ ಸರಿ.

2. ನಮ್ಮ ತಂದೆಯ ಮದುವೆಯು ಯಾವ ಊರಲ್ಲಿ ಮತ್ತು ಯಾವ ಧರ್ಮದ ನೀತಿ ನಿಯಮಗಳ ಪ್ರಕಾರ ಮದುವೆ ಆಗಿರುತ್ತದೆ ಎಂಬುದರ ಕುರಿತು ನನ್ನ ವಾದ ಪತ್ರದಲ್ಲಿ ನಮೂದಿಸಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯ ಮದುವೆಯು ಯಾವ ದಿನಾಂಕ, ಯಾವ ತಿಂಗಳು ಮತ್ತು ಯಾವ ವರ್ಷದಲ್ಲಿ ಆಗಿರುತ್ತದೆ ಎಂಬುದರ ಕುರಿತು ನನ್ನ ವಾದ ಪತ್ರದಲ್ಲಿ ನಮೂದಿಸಿಲ್ಲ ಎಂದರೆ ಸರಿಯಲ್ಲ. ನನ್ನ ವಾದ ಪತ್ರದಲ್ಲಿ ನನ್ನ ಜನ್ಮ ದಿನಾಂಕವನ್ನು ನಮೂದಿಸಿರುವ ಬಗ್ಗೆ ನನಗೆ ಗೊತ್ತಿಲ್ಲ. ಅದೇ ರೀತಿಯಾಗಿ ನನ್ನ ವಾದ ಪತ್ರದಲ್ಲಿ ನಾನು ಯಾವ ಊರಲ್ಲಿ ಜನಿಸಿರುತ್ತೇನೆ ಎಂಬುದರ ಕುರಿತು ನಮೂದು ಇಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ.

3. ನಾನು ನನ್ನವಾದ ಪತ್ರದೊಂದಿಗೆ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ. ನನ್ನ ಹತ್ತಿರ ನಿಪಿ-1 ರಿಂದ 10 ದಾಖಲಾತಿಗಳನ್ನು

ಹೊರತು ಪಡಿಸಿ ಬೇರೆ ದಾಖಲಾತಿಗಳು ನನ್ನ ಹತ್ತಿರ ಇಲ್ಲ ಎಂದರೆ ಸರಿ.

4. ನನ್ನ ಮುಖ್ಯವಿಚಾರಣೆ ಪ್ರಮಾಣ ಪತ್ರವನ್ನು ತಯಾರಿಸಲು ನಮ್ಮ ವಕೀಲರಿಗೆ ನಾನೇ ಮಾಹಿತಿ ಕೊಟ್ಟಿರುತ್ತೇನೆ. ನನ್ನ ಮುಖ್ಯವಿಚಾರಣೆ ಪ್ರಮಾಣ ಪತ್ರದಲ್ಲಿ ನನ್ನ ತಂದೆಯ ಕುರಿತು ಸಂಪೂರ್ಣ ಮಾಹಿತಿಯನ್ನು ನಮೂದಿಸಿಲ್ಲ ಎಂದರೆ ಸಾಕ್ಷಿಯು ನನ್ನ ತಂದೆಯ ವಿಳಾಸವನ್ನು ನಮೂದಿಸಿರುತ್ತೇನೆ ಎಂದು ಹೇಳುತ್ತಾರೆ. ನಮ್ಮ ತಂದೆಯ ಮದುವೆಯು ಯಾವ ಊರಲ್ಲಿ ಆಯಿತು ಎಂಬುದರ ಕುರಿತು ನನ್ನ ಮುಖ್ಯವಿಚಾರಣೆ ಪ್ರಮಾಣ ಪತ್ರದಲ್ಲಿ ನಮೂದಿಸಿಲ್ಲ ಎಂದರೆ ಸರಿ. ಅದೇ ರೀತಿಯಾಗಿ ನನ್ನ ಮುಖ್ಯವಿಚಾರಣೆ ಪ್ರಮಾಣ ಪತ್ರದಲ್ಲಿ ನನ್ನ ತಂದೆಯು ಮದುವೆಯ ದಿನಾಂಕವನ್ನು ನಮೂದಿಸಿಲ್ಲ ಎಂದರೆ ಸರಿ.ಅದೇರೀತಿಯಾಗಿ ಮುಖ್ಯವಿಚಾರಣೆ ಪ್ರಮಾಣ ಪತ್ರದಲ್ಲಿ ನನ್ನ ಜನ್ಮ ದಿನಾಂಕವನ್ನು ನಮೂದಿಸಿಲ್ಲ ಎಂದರೆ ಸರಿ.

5. ನಾನು ಈ ದಾವೆಯಲ್ಲಿ ನಾನು ಒಬ್ಬಳೇ ಮೃತ ಗಂಗಾಧರನ ವಾರಸುದಾರಳು ಎಂದು ಘೋಷಿಸುವಂತೆ ಪರಿಹಾರವನ್ನು ಕೋರಿರುತ್ತೇನೆ. ನಾನು ನನ್ನ ತಂದೆಯ ಮದುವೆಯ ದಿನಾಂಕ ಮತ್ತು ನನ್ನ ಜನ್ಮ ದಿನಾಂಕದ ಕುರಿತು ನ್ಯಾಯಾಲಯಕ್ಕೆ ಮಾಹಿತಿಯನ್ನು ಕೊಡಬೇಕಾಗುತ್ತದೆ ಎಂದರೆ ಸರಿ. ನಾನು ನನ್ನ ತಂದೆಯ ಮದುವೆ ದಿನಾಂಕ ಮತ್ತು ನನ್ನ ಜನ್ಮ ದಿನಾಂಕದ ಕುರಿತು ಮಾಹಿತಿಯನ್ನು ಕೊಡದೇ ಈ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿ.

6. ನಿಪಿ-5ರ ಕ್ರಿಮಿನಲ್ ಮಿಸ್ ನಂ.157/2001 ರ ಆದೇಶ ಪುಟದ ಜೊತೆಗೆ ಒಂದು ದಂಡ ಪ್ರಕ್ರಿಯಾ ಸಂಹಿತೆ ಕಲಂ.125ರಡಿಯಲ್ಲಿ ಅರ್ಜಿಯನ್ನು ಹಾಜರುಪಡಿಸಿರುತ್ತೇನೆ. ಸದರಿ ದಂಡ ಪ್ರಕ್ರಿಯಾ ಸಂಹಿತೆಯ ಕಲಂ.125ರಡಿಯ ಅರ್ಜಿಯ ಕುರಿತು ನಿಮಗೆ ಯಾರು ಮಾಹಿತಿ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಈ ಕುರಿತು ನಮ್ಮ ವಕೀಲರಿಗೆ ಗೊತ್ತು ಎಂದು ಹೇಳಿರುತ್ತಾರೆ.

7. ನಾನು 1ನೇ ಪ್ರತಿವಾದಿಯನ್ನು ನ್ಯಾಯಾಲಯಕ್ಕೆ ಬಂದಾಗ ನೋಡಿರುತ್ತೇನೆ. ಆದರೆ ಅದಕ್ಕಿಂತ ಮೊದಲು ನಾನು ನೋಡಿರುವುದಿಲ್ಲ. ನಾನು ನನ್ನ ವಾದ ಪತ್ರದ ಪ್ಯಾರಾ ನಂ.7ರ 8ನೇ ಸಾಲಿನಲ್ಲಿ 1ನೇ ಪ್ರತಿವಾದಿಯು ಸರ್ಕಾರದ ಸವಲತ್ತುಗಳನ್ನು ಪಡೆಯುವ ಉದ್ದೇಶದಿಂದ ನನ್ನ ತಂದೆಯೊಂದಿಗೆ ಮದುವೆಯಾಗಿರುತ್ತಾರೆ ಎಂದು ನಮೂದಿಸಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯ ಮರಣಾಂತರ 1ನೇ ಪ್ರತಿವಾದಿಯು ವಾರಸಾ ಪ್ರಮಾಣ ಪತ್ರಗಳನ್ನು ಪಡೆದಿರುತ್ತಾರೆ ಎಂದರೆ ಸಾಕ್ಷಿಯು ಪಡೆದಿರುತ್ತಾರೆ ಆದರೆ ನನಗೆ ನಂತರದಲ್ಲಿ ದಾಖಲಾತಿಗಳನ್ನು ಪಡೆದಿರುವ ವಿಚಾರ ಗೊತ್ತಾಗಿರುತ್ತದೆ. 1ನೇ ಪ್ರತಿವಾದಿಯು ವಾರಸಾ ಪ್ರಮಾಣ ಪತ್ರವನ್ನು ಪಡೆದಿರುವ ಕುರಿತು ನಾನು ಎಲ್ಲಿಯೂ ಕೂಡಾ ಪ್ರಶ್ನಿಸಿರುವುದಿಲ್ಲ ಆದರೆ ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದು ಹೇಳುತ್ತಾರೆ. ನಾನು 1ನೇ ಪ್ರತಿವಾದಿಗೆ ವಾರಸಾ ಪ್ರಮಾಣ ಪತ್ರವನ್ನು ಪಡೆದಿರುವದನ್ನು ಪ್ರಶ್ನಿಸಿ ನಾನು ವೈಯಕ್ತಿಕವಾಗಿ ಆಗಲೀ ಅಥವಾ ನಮ್ಮ ವಕೀಲರ ಮುಖಾಂತರವಾಗಲೀ ನೋಟಿಸ್‌ನ್ನು ಕೊಟ್ಟಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಈ ದಾವೆಯನ್ನು ಸಲ್ಲಿಸಿರುತ್ತಾರೆ ಎಂದು ಹೇಳುತ್ತಾರೆ.

8. ನನ್ನ ತಂದೆಯ ಮರಣಾನಂತರ ನಾನು ನನ್ನ ತಂದೆಯ ಮಗಳು ಎಂದು ತೋರಿಸಲು ನಾನು ಯಾವುದೇ ವಾರಸಾ ಪ್ರಮಾಣ ಪತ್ರವನ್ನು ಪಡೆದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಈ ದಾವೆಯನ್ನು ಸಲ್ಲಿಸಿರುತೇನೆ ಎಂದು ಹೇಳುತ್ತಾರೆ. ನಾನು 1ನೇ ಪ್ರತಿವಾದಿಗೂ ಕೂಡಾ ನಾನು ನನ್ನ ತಂದೆಯ ಮಗಳು ಎಂದು ಹೇಳಿ ಯಾವುದೇ ನೋಟಿಸ್ ನ್ನು ಕೊಟ್ಟಿರುವುದಿಲ್ಲ. ನಾನು ನನ್ನ ತಂದೆಯ ಮಗಳು ಎಂದು ಹೇಳಿ ಸರ್ಕಾರಕ್ಕೆ ನನ್ನ ಶಾಲಾ ದಾಖಲಾತಿಗಳೊಂದಿಗೆ ಸರ್ಕಾರಕ್ಕೆ ಅರ್ಜಿಯನ್ನು ಕೊಟ್ಟಿರುತ್ತೇನೆ. ನಾನು ಸರ್ಕಾರಕ್ಕೆ ಯಾವುದೇ ಅರ್ಜಿಯನ್ನು ಕೊಡದೇ ಇದ್ದರೂ ಕೂಡಾ ಕೊಟ್ಟಿರುತ್ತೇನೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸರ್ಕಾರಕ್ಕೆ ಅರ್ಜಿಯನ್ನು 2018 ನೇ ಸಾಲಿನ ಜೂನ್

ಅಥವಾ ಜುಲೈ ತಿಂಗಳಿನಲ್ಲಿ ಕೊಟ್ಟಿರಬಹುದು. ನಾನು ಸರ್ಕಾರಕ್ಕೆ ಅರ್ಜಿಯನ್ನು 2018ನೇ ಸಾಲಿನ ಜೂನ್ ಅಥವಾ ಜುಲೈ ತಿಂಗಳಿನಲ್ಲಿ ಕೊಟ್ಟಿರುವ ಕುರಿತು ನನ್ನ ವಾದ ಪತ್ರದಲ್ಲಿ ನಮೂದಿಸಿಲ್ಲ ಎಂದರೆ ಸರಿ. ನಾನು ಸರ್ಕಾರಕ್ಕೆ ಅರ್ಜಿಯನ್ನು ಕೊಟ್ಟಿರುವ ಕುರಿತು ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲಾತಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ನನಗೆ ಸರ್ಕಾರದವರು ಗಂಗಾಧರನ ಮಗಳು ಎಂದಾಗಲೀ ಅಥವಾ ನಾನು ಗಂಗಾಧರನ ಮಗಳು ಅಲ್ಲ ಎಂಬುದರ ಕುರಿತು ಯಾವುದೇ ಹಿಂಬರವನ್ನು ಕೊಟ್ಟಿಲ್ಲ ಎಂದರೆ ಸಾಕ್ಷಿಯು ಮೌಖಿಕವಾಗಿ ನೀವು ನ್ಯಾಯಾಲಯದಲ್ಲಿ ಇತ್ಯರ್ಥ ಮಾಡಿಕೊಂಡು ಬನ್ನಿ ಎಂದು ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ಸರ್ಕಾರದವರು ಯಾವುದಾದರೂ ಅರ್ಜಿಗೆ ಹಿಂಬರವನ್ನು ಕೊಡಬೇಕಾದರೆ ಲಿಖಿತವಾಗಿ ಕೊಡುತ್ತಾರೆ ಹೊರತು ಮೌಖಿಕವಾಗಿ ಹೇಳುವುದಿಲ್ಲ ಎಂದರೆ ಸರಿಯಲ್ಲ.

9. ನಿಪಿ-1ರ ದಾಖಲಾತಿಯಲ್ಲಿ ಹೆಂಡತಿ ಹೆಸರು ಕಾಲಂ ನಲ್ಲಿ ವಸಂತ ಊ ವಸಂತಿ ಎಂದು ನಮೂದು ಆಗಿರುತ್ತದೆ ಎಂದರೆ ಸಾಕ್ಷಿಯು ಸುಳ್ಳು ಎಂದು ಹೇಳುತ್ತಾರೆ. ನಿಪಿ-6ರ ದಾಖಲಾತಿಯ ಬಗ್ಗೆ ನಿಮಗೆ ಯಾರು ಮಾಹಿತಿ ಕೊಟ್ಟಿರುತ್ತಾರೆ ಸಾಕ್ಷಿಯು ನಮ್ಮ ವಕೀಲರಿಗೆ ಗೊತ್ತು ಎಂದು ಹೇಳುತ್ತಾರೆ. ನಿಪಿ-7 ಮತ್ತು 8 ರ ದಾಖಲಾತಿಗಳ ಬಗ್ಗೆ ನಿಮಗೆ ಯಾರು ಮಾಹಿತಿ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ನಮ್ಮ ವಕೀಲರಿಗೆ ಗೊತ್ತು ಎಂದು ಹೇಳುತ್ತಾರೆ. ನಾನು ಗಂಗಾಧರನ ಮಗಳು ಎಂದು ಹೇಳಿ ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ವಾದ ಪತ್ರದಲ್ಲಿ ಮುಖ್ಯವಾದ ಅಂಶಗಳನ್ನು ಬಿಟ್ಟು ನನಗೆ ಅಂಶಗಳನ್ನು ಮಾತ್ರ ನಮೂದಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ,

**ಹೆಚ್ಚುವರಿ ಸಿವಿಲ್ ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು,**
**ಬಸವನ ಬಾಗೇವಾಡಿ.**